ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/162/2013-14. ದಿನಾಂಕ:08-08-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಅಕ್ಕವ್ವಗಳ ರಾಜಮ್ಮ ಗಂಡ ಅಕ್ಕವ್ವಗಳ ಚಿತ್ತಪ್ಪ<br>2)ಮೂಗಪ್ಪ ತಂದೆ ಲೇಟ್ ಅಕ್ಕವ್ವಗಳ ಬಸಲಿಂಗಪ್ಪ<br>3)ಸಿದ್ದಲಿಂಗಪ್ಪ ತಂದೆ ಲೇಟ್ ಅಕ್ಕವ್ವಗಳ ಬಸಲಿಂಗಪ್ಪ<br>4)ಓಬಣ್ಣ ತಂದೆ ಲೇಟ್ ಅಕ್ಕವ್ವಗಳ ಬಸಲಿಂಗಪ್ಪ<br>ಹಾರಕಬಾವಿ ಗ್ರಾಮ ಕೂಡ್ಲಿಗಿ ತಾಲೂಕು | ಡಿ.ಜಿ.ಅಜ್ಜಯ್ಯ ತಂದೆ ಡಿ.ಬಿ.ಕರಿಯಪ್ಪ<br>ಹಾರಕಬಾವಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಹಾರಕಬಾವಿ ಗ್ರಾಮದ ಸನಂ 103ಬಿ/2. ವಿಸ್ತೀರ್ಣ 6-00 ಎಕ್ರೆ ಜಮೀನನ್ನು ಪಾಲು ವಿಭಾಗದ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹಾರಕಬಾವಿ ಗ್ರಾಮದ ಸನಂ 103ಬಿ/2. ವಿಸ್ತೀರ್ಣ 6-00 ಎಕ್ರೆ ಜಮೀನನ್ನು ಸದರಿ ಗ್ರಾಮದ ಅಕ್ಕವ್ವಗಳ ರಾಜಮ್ಮ ಗಂಡ ಅಕ್ಕವ್ವಗಳ ಚಿತ್ತಪ್ಪ ಇವರು ದಿನಾಂಕ 05-03-2014 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹಾರಕಬಾವಿ ಇವರು ನಮೂನೆ-21 ನೋಟಿಸನ್ನು ದಿನಾಂಕ 21-06-2014. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಡಿ.ಜಿ.ಅಜ್ಜಯ್ಯ ತಂದೆ ಡಿ.ಬಿ.ಕರಿಯಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 26/2013-14. ದಿನಾಂಕ 22-07-2014. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 11-12-2014 ರಿಂದ 08-08-2016 ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಹಾರಕಬಾವಿ ಗ್ರಾಮದ ಸನಂ 103ಬಿ/2. ವಿಸ್ತೀರ್ಣ 6-00 ಎಕ್ರೆ ಜಮೀನು ಅರ್ಜಿದಾರರಾದ ಅಕ್ಕವ್ವಗಳ ರಾಜಮ್ಮ ಗಂಡ ಅಕ್ಕವ್ವಗಳ ಚಿತ್ತಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 05-03-2014 ರಂದು ಪಾಲು ವಿಭಾಗದ ಪತ್ರ ಬರೆಯಿಸಿ ಅದರ ಪ್ರಕಾರ ಅಳತೆ ಮಾಡಿಸಿ 11ಇ. ನಕ್ಷೆಯನ್ನು ಸಹಾ ಪಡೆದಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೇ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನಲ್ಲಿ ಪ್ರತಿವಾದಿಯ ತಂದೆಯವರಾದ ಕರಿಯಪ್ಪ ತಂದೆ ಕರಿಯಪ್ಪ ಇವರಿಗೆ 01 ನೇ ಅರ್ಜಿದಾರರಾದ ರಾಜಮ್ಮ ಗಂಡ ಅಕ್ಕವ್ವಗಳ ಚಿತ್ತಪ್ಪ ಇವರು ಕ್ರಯಕ್ಕೆ ಕೊಟ್ಟಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಪು.ತಿ.ನೊ-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಉಭಯರು ಸಮ್ಮತಿಸಿದಂತೆ ಪಾಲು ವಿಭಾಗದ ಪತ್ರದನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹಾರಕಬಾವಿ ಗ್ರಾಮದ ಸನಂ 103ಬಿ/2. ವಿಸ್ತೀರ್ಣ 6–00 ಎಕ್ರೆ ಜಮೀನನ್ನು ದಿನಾಂಕ 05–03–2014 ರ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೇ ಪ್ರಕಾರ

| ಕ್ರಸಂ | ಹೆಸರು | ಸನಂ | ವಿಸ್ತೀರ್ಣ |
|---|---|---|---|
| 1 | 2 | 3 | 4 |
| 1 | ಅಕ್ಕವ್ವಗಳ ರಾಜಮ್ಮ ಗಂಡ ಅಕ್ಕವ್ವಗಳ ಚಿತ್ತಪ್ಪ | 103ಬಿ/2ಪೈಕಿ. | 3–00. |
| 2 | ಮೂಗಪ್ಪ ತಂದೆ ಲೇಟ್ ಅಕ್ಕವ್ವಗಳ ಬಸಲಿಂಗಪ್ಪ | 103ಬಿ/2ಪೈಕಿ. | 1–00. |
| 3 | ಸಿದ್ದಲಿಂಗಪ್ಪ ತಂದೆ ಲೇಟ್ ಅಕ್ಕವ್ವಗಳ ಬಸಲಿಂಗಪ್ಪ | 103ಬಿ/2ಪೈಕಿ. | 1–00. |
| 4 | ಓಬಣ್ಣ ತಂದೆ ಲೇಟ್ ಅಕ್ಕವ್ವಗಳ ಬಸಲಿಂಗಪ್ಪ | 103ಬಿ/2ಪೈಕಿ. | 1–00. |

ಈ ಮೇಲಿನಂತೆ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 08–08–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ, ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಅಕ್ಕವ್ವಗಳ ರಾಜಮ್ಮ ಗಂಡ ಅಕ್ಕವ್ವಗಳ ಚಿತ್ತಪ್ಪ ಹಾಗೂ ಇತರರು ಹಾರಕಬಾವಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಹೆಚ್.ಪರಮೇಶ್ವರಪ್ಪ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಡಿ.ಜಿ.ಅಜ್ಜಯ್ಯ ತಂದೆ ಡಿ.ಬಿ.ಕರಿಯಪ್ಪ ಹಾರಕಬಾವಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಜಿ.ಸಿದ್ದನಗೌಡ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.